ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯದಲ್ಲಿ, ತರೀಕೆರೆ.

ಸಿಸಿ ನಂಬರ್.39/2017

| | | | |
|---|---|---|---|
| ಸಾಕ್ಷಿಯ ಹೆಸರು | : ಅಸ್ಗರ್ ಅಲಿ | ಸಿ.ಡಬ್ಲ್ಯು | 13 |
| ತಂದೆಯ ಹೆಸರು | : ಖಲಂಧರ್ ಖಾನ್ | ಪಿ.ಡಬ್ಲ್ಯು | 9 |
| ವಯಸ್ಸು | : 55 ವರ್ಷ | | |
| ಉದ್ಯೋಗ | : ಕೂಲಿ ಕೆಲಸ | | |
| ವಾಸ ಸ್ಥಳ | : ಮಾಕನ ಹಳ್ಳಿ | | |

ದಿನಾಂಕಃ29.09.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು:

ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-

ನನಗೆ ಆರೋಪಿಯ ಪರಿಚಯ ನನಗೆ ಇರುವುದಿಲ್ಲ, ಈ ಮೊದಲು ನಾನು ಆತನನ್ನು ನೋಡಿರುವುದಿಲ್ಲ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ಪೋಲೀಸರು ನನ್ನ ಹೆಸರನ್ನು ಸಾಕ್ಷಿಯಾಗಿ ಏಕೆ ನಮೂದಿಸಿದ್ದಾರೋ ನನಗೆ ಗೊತ್ತಿಲ್ಲ. ನಾನು ಪೋಲೀಸರಿಗೆ ಯಾವುದೇ ಹೇಳಿಕೆ ಕೊಟ್ಟಿಲ್ಲ.

(ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ. ರವರು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದಃ-

ಆರೋಪಿ ಜೀವನ್ ಮಂಗಳ ಪಾಲಿಸಿಗಳನ್ನು ಮಾಡಿಸಲು ಸಮನ್ವಯ ಆರೋಗ್ಯ ಶಿಕ್ಷಣ ಮತ್ತು ಗ್ರಾಮೀಣ ಅಭಿವೃದ್ಧಿ ಸೊಸೈಟಿಯವರ ಏಜೆನ್ಸಿಯನ್ನು ಪಡೆದುಕೊಂಡಿದ್ದಾರೆ ಅದರಂತೆ ನಾನು ಅತ್ತಿಕಟ್ಟೆಯ ವಾಸಿ ಬಸವರಾಜಪ್ಪನವರ ಹತ್ತಿರ ಜೀವನ್ ಮಧುರ ಪಾಲಿಸಿಯನ್ನು ವರ್ಷಕ್ಕೆ 3 ಸಾವಿರ ರೂಪಾಯಿಯಂತೆ 30 ಸಾವಿರಕ್ಕೆ ಪಾಲಿಸಿ ಮಾಡಿಸಿದ್ದೆ, ನನಗೆ ಪಾಲಿಸಿ ಬಾಂಡ್ ಕೂಡ ಬಂದಿತ್ತು, ಬಸವರಾಜಪ್ಪ ನನಗೆ ರಶೀದಿಯನ್ನು ಕೂಡ ತಂದು ಕೊಟ್ಟಿದ್ದರು, ನಾನು ಸೊಸೃಟಿಯ ಕಛೇರಿಯಲ್ಲಿ ವಿಚಾರಿಸಲಾಗಿ ನಾನು ಕಟ್ಟಿರುವ ಹಣ ಸಂದಾಯ ಆಗಿದೆ ಎಂದು ಗೊತ್ತಾಯಿತು. ನನ್ನಂತೆಯೇ ನಮ್ಮ ಊರಿನ ಇತರ ವ್ಯಕ್ತಿಗಳು ಕೂಡ ಪಾಲಿಸಿ ಪಡೆದುಕೊಂಡಿದ್ದರು ಎಂದರೆ ಸರಿಯಲ್ಲ.

ಬಸವರಾಜಪ್ಪನವರು ನನಗೆ ಸಂಬಂಧಿಸಿದ 12 ಸಾವಿರ ರೂಗಳನ್ನು ಸೊಸೈಟಿಯಲ್ಲಿ ಜಮಾ ಮಾಡಿದ್ದರೂ ಕೂಡ ಸೊಸೈಟಿಯ ಕಾರ್ಯದರ್ಶಿ, ಮತ್ತು ಖಜಾಂಚಿ ಇತರರು ನಮ್ಮ ಹಣದ ಪೈಕಿ ಕೇವಲ 3 ಸಾವಿರ ರೂಗಳನ್ನು ಮಾತ್ರ ಜಮಾ ಮಾಡಿಕೊಂಂಡು ಉಳಿದ 9 ಸಾವಿರ

ರೂಗಳನ್ನು ದುರುಪಯೋಗ ಮಾಡಿಕೊಂಡಿರುತ್ತಾರೆ. ಆರೋಪಿತರು ಒಟ್ಟು 4,80,423 ರೂಗಳನ್ನು ಸ್ವತಂಕ್ಕೆ ಬಳಸಿಕೊಂಡು ಪಾಲಿಸಿದಾರರಿಗೆ, ಭಾರತೀಯ ಜೀವನ್ ನಿಗಮಕ್ಕೆ ಮೋಸ ಮಾಡಿರುತ್ತಾರೆ ಎಂದು ಪೋಲೀಸರಿಗೆ ಹೇಳಿಕೆಯನ್ನು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಆರೋಪಿಯನ್ನು ನಾನು ನೋಡಿಲ್ಲ. ಸಾಕ್ಷಿಯು ಅಲ್ಲಗಳೆದ ಹೇಳಿಕೆಯ ಭಾಗವನ್ನು ನಿಪಿ-160 ಎಂದು ಗುರುತಿಸಲಾಯಿತು.

ಮರುವಿಚಾರಣೆ : ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ
ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.